ಜೆಲ್ಲೆಯಿಂದ ಕೆಇಬಿಗೆ ಹೆಚ್ಚು ಆದಾಯ ಇಲ್ಲ.ಅದಕ್ಕೆ ಹೆಚ್ಚು ವಿದ್ಯುತ್ ಸರಬರಾಜು ಮಾಡಬೇಡಿ ಎಂದು ಮೌಖಿಕವಾದಂತಹ ಆದೇಶವನ್ನು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನಮ್ಮ ಪ್ರಶ್ನೆ ಏನು ಅಂದರೆ ಎಷ್ಟು ತಾಸು ಲೋಡ್ ಶೆಡಿಂಗ್ ಮಾಡಬೇಕೆಂದು ಸೂಚನೆ ಕೊಟ್ಟಿದ್ದೀರಿ, ಈಗ ಬಿಜಾಪುರ ಮತ್ತು ಬಾಗಲಕೋಟೆಯಲ್ಲಿ ಎಷ್ಟು ತಾಸು ಲೋಡ್ ಶೆಡಿಂಗ್ ಮಾಡುತ್ತಾರೆಂದು ಹೇಳಬೇಕು ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಶರಣ ಬಸಪ್ಪ ದರ್ಶನಾಪುರ : ಬಿಜಾಪುರ ಮತ್ತು ಬಾಗಲಕೋಟೆಗಳಿಗೆ ಪ್ರತ್ಯೇಕವಾದಂತಹ ಆದೇಶವನ್ನು ಕೊಟ್ಟಿಲ್ಲ. ಕರ್ನಾಟಕ ರಾಜ್ಯದ ತುಂಬಾ ಯಾವ ನೀತಿಯನ್ನು ನಾವು ಅನುಸರಿಸಿಕೊಂಡು ಬರುತ್ತಿದ್ದೇವೆ. ಅದೇ ಪ್ರಕಾರ ಬಿಜಾಪುರ ಜಿಲ್ಲೆಗೂ ಅನ್ವಯಿಸುತ್ತದೆ. ಬಿಜಾಪುರಕ್ಕ ಪ್ರತ್ಯೇಕ, ಕೋಲಾರ ಪ್ರತ್ಯೇಕ, ತುಮಕಾರು ಪ್ರತ್ಯೇಕವಾಗಿ ನಾವು ಆದೇಶ ಕೊಟ್ಟಿಲ್ಲ.

ಶ್ರೀ ಬಸವನಗೌಡ ಪಾಟೀಲ್: ಮಾನ್ಯ ಸಚಿವರಲ್ಲಿ ಒಂದೇ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಜನ ಪ್ರತಿನಿಧಿಗಳಿಗೆ ಈ ರೀತಿಯ ಉತ್ತರ ಬರುತ್ತಿದೆ. ಅದಕ್ಕೆ ಅವರು ಇನ್ನೊಮ್ಮೆ ಇದರ ಬಗ್ಗೆ ಅಲೋಚನೆ ಮಾಡಬೇಕು.

ವೃಷಭಾವತಿ ನದಿಯನ್ನು ಶುದ್ಧೀಕರಿಸುವ ಬಗ್ಗೆ

75(693) ಶ್ರೀ ಸಿ.ಎಂ.ಲಿಂಗಪ್ಪ (ರಾಮನಗರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1.ವೃಷಭಾವತಿ ನದಿಯಲ್ಲಿ ಹರಿಯುವ ಬೆಂಗಳೂರು ನಗರದಿಂದ ವಿಸರ್ಜಿಸಲಾದಅತಿ ಮಾಲ್ಯಿವಾದ ನೀರನ್ನು 1998 ನೇ ಇಸವಿಏಪ್ರಿಲ್ ತಿಂಗಳೊಳಗಾಗಿ ಶುದ್ಧೀಕರಿಸಿ ಬಿಡಲಾಗುವುದ ಎಂದು ಮಾನ್ಯ ಬೆಂಗಳುರು ನಗರಾಭಿವೃದ್ಧಿ ಸಚಿವರು ಈ ಹಿಂದೆ ವಿಧಾನ ಸಭೆಯಲ್ಲಿ ಉತ್ತರ ನೀಡಿದ್ದುದು ನಿಜವೆ?

2.ಹಾಗಿದ್ದಲ್ಲಿ ಈ ಭರವಸೆಯ ಮಾತುಗಳು ಶೇಕಡ ಎಷ್ಟು ಭಾಗ ಕಾರ್ಯಗತವಾಗಿದೆ.

3.ಮಾಲಿನ್ಯಗೊಂಡ ಈ ನೀರಿನ ಉಪಯೋಗದಿಂದ ಭೈರಮಂಗಲ ಜಲಾಶಯಅಚ್ಚುಕಟ್ಟು ಪ್ರದೇಶದಲ್ಲಿ ತೆಂಗು,ಭತ್ತ, ಕಬ್ಬು, ರಾಗಿ ಇತ್ಯಾದಿ ಬೆಳೆಗಳು ನಾಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4:ಹಾಗಿದ್ದಲ್ಲಿ ಈಕೊಳಚೆ ನೀರನ್ನು ಶುದ್ಧೀಕರಿಸಿ ಶುದ್ಧೀಕರಿಸಿ ಹೊರಗೆ ಬಿಡುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳು ಯಾವುವು?

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು)

1.ನಿಜ

2.ಹಿಂದೆ ಈ ಘಟಕವನ್ನು ಏಪ್ರಿಲ್ ಅಥವಾ ಮೇ 1998ರಲ್ಲಿ ಚಾಲನೆ ಮಾಡಲು ಯೋಚಿಸಲಾಗಿತ್ತು. ಬೆಂಗಳೂರು ನಗರದಲ್ಲಿಹಿಂದೆಂದೂ ಕಾಣದಂತ ಮಳೆ ನೀರು ತುಂಬಿ ಕೆಲವು ಘಟಕಗಳಿಗೆ ಮತ್ತು ಯಾಂತ್ರಿಕ ಭಾಗಗಳಿಗೆಹಾನಿಯುಂಟಾಯಿತು. ಇದರಿಂದ ಈ ಘಟಕದ

ಕಾರ್ಯಚಾಲನೆಯಲ್ಲಿಬಹಳ ವಿಳಂಬವುಂಟಾಗಿದೆ. ಈಗ ಈ ಘಟಕದ ಎಲ್ಲಾರಿಪೇರಿ ಕೆಲಸಗಳನ್ನು ಮಾಡಲಾಗಿದೆ ಮತ್ತು ಎಲ್ಲಾ ಘಟಕಗಳನ್ನುಪರೀಕ್ಷೆ ಚಾಲನೆಮಾಡಲಾಗುತ್ತಿದೆ. ಮೂರುತಿಂಗಳುಗಳಲ್ಲಿ ಈ ಘಟಕವನ್ನು ಕಾರ್ಯ ಚಾಲನೆಮಾಡಲಾಗುವುದು.ಇದಲ್ಲದೆತೆರೆದ ಕಾಲುವೆಯಲ್ಲಿಮುಕ್ತವಾಗಿಹರಿಯುತ್ತಿರುವ ಕೊಳಚೆ ನೀರನ್ನುಮುಖ್ಯಕೊಳವೆಗಳ ಕಡೆ ತಿರುಗಿಸಲು ಆಗತ್ಯವಾದಕೆಲಸವನ್ನು ಸಹ ಪೂರ್ಣಮಾಡಲಾಗಿದೆಮತ್ತುಘಟಕವನ್ನು ಶೀಘ್ರದಲ್ಲಿ ಕಾರ್ಯಚಾಲನೆಮಾಡಲಾಗುವುದು.

3. ಬಂದಿದೆ.

4. 123 ಎಂಎಲ್‌ಡಿ ಸಾಮರ್ಥ್ಯದ ಈಗವೃಷಭಾವತಿಕಣಿವೆಯಲ್ಲಿ ಪ್ರಾಥಮಿಕ ಹಂತದ ಸಂಸ್ಕರಣಘಟಕ ಕಾರ್ಯ ನಿರ್ವಹಿಸುತ್ತಿದೆ. ಈಗ ದ್ವಿತೀಯ ಹಂತದ ಕೊಳಚೆ ನೀರಿನಸಂ ಸ್ಕರಣ ಘಟಕವನ್ನು ಕಾರ್ಯಚಲನೆ ಮಾಡಿಕೊಳಚೆ ನೀರನ್ನು ಸಂಸ್ಕರಿಸಿದರೆ ಇದರಿಂದಹರಿದುಬರುವ ಸಂಸ್ಕರಣೆ ಗೊಂಡುನೀರುಮಾಲಿನ್ಯ ರಹಿತವಾಗಿರುತ್ತದೆ ಮತ್ತು ಈ ನೀರಿನಿಂದ ಕೆಳ ದಂಡೆಯ ಕಾಲುವೆ ಮತ್ತುಕೆರೆಗಳಿಗೆಯಾವುದೇ ರೀತಿಯ ಮಾಲಿನ್ಯವುಂಟಾಗುವುದಿಲ್ಲ.

ಶ್ರೀ ಸಿ.ಎಂ. ಲಿಂಗಪ್ಪ : ಸನ್ಮಾನ್ಯ ಉಪಾಧ್ಯಕ್ಷರೆ, ಕೊಟ್ಟಿರತಕ್ಕ ಉತ್ತರ ಬಹಳ ಸಮರ್ಪಕವಾಗಿ, ಸಮರ್ಥವಾಗಿ ಕೊಟ್ಟಿದ್ದಾರೆ. ಉತ್ತರ ಮಟ್ಟಿಗೆ ಸಮರ್ಪಕವಾಗಿದೆ. ಆದರೆ ಅಲ್ಲಿ ಕೆಲಸ, ಅಲ್ಲಿ ಏನೇನೂ ಆಗದೇ ಇರುವುದನ್ನು ಉತ್ತರ ರೂಪದಲ್ಲಿ ಇಲ್ಲಿ ಬಹಳ ಸಮರ್ಥನೀಯವಾಗಿ ಸಮರ್ಪಕವಾಗಿ ತಾವು ಕೊಟ್ಟಿದ್ದೀರಿ. ಒಂದು ಕಾರಣ ತಾವು ಹೇಳುತ್ತಿದ್ದೀರಿ. 1998ನೇ ಇಸವಿಯಲ್ಲಿ ಬಹಳ ಮಳೆ ಬಿತ್ತು ಎಂದು ಹೇಳಿದ್ದೀರಿ. ಇದು ನೂರಕ್ಕೆ ನೂರು ಸುಳ್ಳು ಆಗಿರತಕ್ಕ ವಿಚಾರ. ಜಾಸ್ತಿ ಮಳೆ ಬಂದಿದ್ದು 1998ನೇ ಇಸವಿಯ ಆಗಸ್ಟ್‌ನಲ್ಲಿ. ಮುಗಿಯಬೇಕಾದುದು 98ರ ಏಪ್ರಿಲ್‌ನಲ್ಲಿ, ಈ ರೀತಿ ತಾವು ವಿಷಯವನ್ನು ಮರೆಮಾಚಿ ಆವೃಷಭಾವತಿ ನದಿಯಲ್ಲಿ ಬೆಂಗಳೂರಿನಿಂದ ಬಿಡತಕ್ಕ ಎಲ್ಲಾ ವಿಧದ ವಿಷಗಳನ್ನು, ವಿಷದ ರಾಸಾಯನಿಕವನ್ನು ಇವತ್ತು ಬಿಟ್ಟು ಬೈರಮಂಗಲ ಕೆರೆಯನ್ನು ಬಹಳ ಮಾಲಿನ್ಯ ಮಾಡಿದ್ದೀರಿ.ಎಷ್ಟು ತಿಂಗಳಿನಲ್ಲಿ ಈ ಕೆಲಸ ಮುಗಿಸುತ್ತೀರೆಂಬ ಬಗ್ಗೆ ನನಗೆ ನಿರ್ದಿಷ್ಟ ಉತ್ತರ ಬೇಕು.

ಶ್ರೀ ಬಿ. ಎನ್.ಬಚ್ಚೇಗೌಡ (ಬೆಂಗಳೂರು ನಗರಾಭಿವೃದ್ಧಿ ಸಚಿವರ ಪರವಾಗಿ): ಸನ್ಮಾನ್ಯ ಉಪಾಧ್ಯಕ್ಷರೆ, ವೃಷಭಾವತಿಯಲ್ಲಿ ಅತಿ ಹೆಚ್ಚು ನೀರು ಬಂದಿದ್ದರಿಂದ ಟ್ರೀಟ್‌ಮೆಂಟ್ ಮಾಡುವಂಥ ಶುದ್ಧೀಕರಣ ಘಟಕಗಳಿಂದ ಡೈವರ್ಷನ್ ಚಾನೆಲ್ ಮಾಡಿ ಅದರಲ್ಲಿ ಮಾಲಿನ್ಯ ತಪ್ಪಿಸಿ ಶುದ್ಧವಾದ ನೀರು ಕೊಡುವುದು ತಡವಾಗಿದೆ. ಈಗ 120 ಎಂಎಲ್‌ಡಿ ಕೆಪ್ಯಾಸಿಟಿಯನ್ನು 180 ಎಂಎಲ್‌ಡಿ ಮಾಡಬೇಕಿರುವುದರಿಂದ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರವಾಗಿ ಇನ್ನುಆರು ತಿಂಗಳೊಳಗೆ ಸಂಪೂರ್ಣ ಸರಿಪಡಿಸಿವು ಮೂಲಕ ಮಾಲಿನ್ಯವಾದ ನೀರನ್ನು ತಪ್ಪಿಸಿ ಮಾಲಿನ್ಯರಹಿತ ನೀರನ್ನು ಒದಗಿಸಿಕೊಟ್ಟು ಅವರ ಭತ್ತ ಮತ್ತು ತೆಂಗು ಬೆಳೆ ಉಳಿಯುವ ಕಾರ್ಯ ಮಾಡುತ್ತೇವೆ.

ಶ್ರೀ ಸಿ.ಎಂ.ಲಿಂಗಪ್ಪ : ಸಚಿವರ ಉತ್ತರದಿಂದ ನೀವು ಈ ಕೆಲಸ ಮಾಡುವುದಿಲ್ಲವೆಂದು ತೀರ್ಮಾನವಾಯಿತು. ಆದುದರಿಂದ ,ನಾನು ಮಾನ್ಯ ಸಚಿವರಾದ ಸಿಂಧ್ಯರವರಲ್ಲಿ ಕೇಳಿಕೊಳ್ಳುವುದೇನೆಂದರೆ, ಅವರು ಏನಾದರೂ ಮಾಡಿ ಈ ಕೆಲಸವನ್ನು ಆದಷ್ಟು ಬೇಗೆ ಮಾಡಿದರೆ ಅವರೂ ಉಳಿದುಕೊಳ್ಳುತ್ತಾರೆ, ನಾವೂ ಉಳಿದುಕೊಳ್ಳುತ್ತೇವೆ. ಇಲ್ಲದಿದ್ದರೆ, ಅವರ ರೈತರು ಉಳಿಯುವಂತಿಲ್ಲ,

ನಮ್ಮ ರೈತರೂ ಉಳಿಯುವಂತಿಲ್ಲ. ದಯವಿಟ್ಟು ಈ ಸಂಬಂಧವಾಗಿ ಆರು ತಿಂಗಳು, ವರ್ಷವೆಂದು ಕೇಳುವುದು ಬೇಡ, ಇದನ್ನು ಆದ್ಯತೆಯ ಕಾರ್ಯಕ್ರಮವೆಂದು ತಿಳಿದುಕೊಂಡು ಉತ್ತರ ಕೊಡಿ.

ಶ್ರೀ ಬಿ.ಎನ್. ಬಚ್ಚೇಗೌಡ : ಈಗ ಸೂಯೇಜ್ ಟ್ರೀಟಮೆಂಟ್ ಪ್ಲಾಂಟ್ ಹಾಕಿರುವ ವಿಚಾರ ಅವರಿಗೂ ಗೊತ್ತಿರುವುದರಿಂದ ಬರುವ ಆರು ತಿಂಗಳೊಳಗಾಗಿ ಚಾಲು ಮಾಡಿ ಕಾರ್ಯಗತ ಗೊಳಿಸುತ್ತೇವೆ.

ಗೋವಾ ಸ್ವಾತಂತ್ರ್ಯ ಯೋಧರಿಗೆ ಗೌರವಧನವನ್ನು ಸ್ಥಗಿತಗೊಳಿಸಿರುವ ಬಗ್ಗೆ

76 (714) ಶ್ರೀ ಅಶೋಕ ಶಂಕರ ಕಾಟ್ವೆ (ಹುಬ್ಬಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗೋವಾ ಸ್ವಾತಂತ್ರ್ಯ ಯೋಧರಿಗೆ ನೀಡುತ್ತಿದ್ದ ಗೌರವಧನವನ್ನು ಈಗ ಸ್ಥಗಿತ ಗೊಳಿಸಿರುವುದಕ್ಕೆ ಕಾರಣಗಳೇನು?

ಆ) ಇವರಿಗೂ ಗೌರವಧನ ನೀಡುವುದನ್ನು ಪುನರ್‌ಪರಿಶೀಲಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಇ) ಹಾಗಿದ್ದಲ್ಲಿ ಎಂದಿನಿಂದ ನೀಡಲಾಗುವುದು.

ಶ್ರೀ ಜೆ.ಹೆಚ್ ಪಟೇಲ್ (ಮುಖ್ಯಮಂತ್ರಿಗಳು)

ಅ) ಗೋವಾ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿದವರಿಗೆ ಗೌರವಧನ ಮಂಜೂರು ಮಾಡುವ ಕುರಿತು ಶ್ರೀ ಜಿ.ಎಲ್.ರಾಮರೆಡ್ಡಿಯವರನ್ನು ತಂಡದ ನಾಯಕರನ್ನಾಗಿ ನೇಮಿಸಿದ್ದು ಸದರಿಯವರು ನೀಡಿದ ಪ್ರಮಾಣಪತ್ರದ ಆಧಾರದ ಮೇಲೆ ಗೌರವಧನ ಮಂಜೂರು ಮಾಡಲಾಗುತ್ತಿತ್ತು. ಸದರಿ ಯೋಜನೆ ಸಮರ್ಪಕವಾಗಿ ಕೆಲಸ ನಿರ್ವಹಿಸದ ಕಾರಣದ ಮೇರೆಗೆ ದಿನಾಂಕ 19-4-95ರಿಂದ ಜಾರಿಗೆ ಬರುವಂತೆ ಈ ಯೋಜನೆಯನ್ನು ಸರ್ಕಾರ ಹಿಂತೆಗೆದುಕೊಂಡಿದೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಶ್ರೀ ಅಶೋಕ್ ಶಂಕರ್ ಕಾಟ್ವೆ : ಸನ್ಮಾನ್ಯ ಉಪಾಧ್ಯಕ್ಷರೆ, ಗೋವಾವಿಮೋಚನಾ ಚಳವಳಿಯಲ್ಲಿ ಭಾಗವಹಿಸಿದಂಥ ಸ್ವಾತಂತ್ರ್ಯ ಯೋಧರಿಗೆ ಹಲವಾರು ವರ್ಷಗಳಿಂದ ಗೌರವಧನವನ್ನು ಸರ್ಕಾರ ಕೊಡುತ್ತಿದ್ದು, ಆದರೆ, ದಿನಾಂಕ 19.4.95ರಿಂದ ಗೌರವಧನವನ್ನು ಕೊಡು ವುದನ್ನು ನಿಲ್ಲಿಸಲಾಯಿತು. ಸದರಿ ಚಳವಳಿಯಲ್ಲಿ ಉತ್ತರ ಕರ್ನಾಟಕದ ಬೆಳಗಾವಿ, ಬಿಜಾಪುರ, ಧಾರವಾಡ, ಕಾರವಾರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಭಾಗಗಳಿಂದ ಸಾವಿರಾರು ಸಂಖ್ಯೆಯಲ್ಲಿ ಸ್ವಾತಂತ್ರ್ಯ ಯೋಧರು ಭಾಗವಹಿಸಿದ್ದರಿಂದ ಆಗಿನ ಸರ್ಕಾರ ಅವರಿಗೆ ಗೌರವಧನವನ್ನು ಮಂಜೂರು ಮಾಡಿತ್ತು. ಅವರ ಕಾರ್ಯನಿರ್ವಹಣೆ ಸರಿಯಾಗಿಲ್ಲವೆನ್ನುವ ಕಾರಣಕ್ಕಾಗಿ ಗೌರವಧನ ಕೊಡುವುದನ್ನು ನಿಲ್ಲಿಸಿದರು. ಅದುದರಿಂದ, ಗೋವಾ ವಿಮೋಚನಾ ಚಳವಳಿಯಲ್ಲಿ ಭಾಗವಹಿಸಿದ್ದ ಸ್ವಾತಂತ್ರ್ಯ ಯೋಧರಿಗೆ ಗೌರವಧನ ಕೊಡುವುದನ್ನು ಮುಂದುವರೆಸಬೇಕೆಂದು ಕೇಳಿಕೊಳ್ಳುತ್ತೇನೆ.